

# ತ್ರಿವರ್ಣ ಸಂಭ್ರಮ

■ ಚಿತ್ರ– ಬರಹ:
**ದೇವರು ಆರ್. ಭಟ್ ಕಲಗಾರು**

ಪ್ರತಿ ವರ್ಷ ಆಗಸ್ಟ್ ತಿಂಗಳು ಬಂತೆಂದರೆ ದೇಶದ ತುಂಬೆಲ್ಲಾ ಧ್ವಜದ ಸಂಭ್ರಮ. ದೇಶದ ಅಖಂಡತೆ, ಸಾರ್ವಭೌಮತ್ವದ ಪ್ರತೀಕವಾಗಿ ಎಲ್ಲೆಲ್ಲೂ ಧ್ವಜ ರಾರಾಜಿಸುತ್ತಿರುತ್ತದೆ. ಅದರಲ್ಲಿ ಕೇಸರಿ, ಬಿಳಿ ಮತ್ತು ಹಸಿರು ಮೂರು ಬಣ್ಣಗಳು ಎದ್ದು ಕಾಣುತ್ತವೆ. ಈ ಸಂಭ್ರಮವನ್ನು ಆಚರಿಸುವಲ್ಲಿ ನಮ್ಮ ಪ್ರಕೃತಿಯೂ ಹಿಂದೆ ಬಿದ್ದಿಲ್ಲ ಎನ್ನುವಂತಿದೆ ಈ ಚಿತ್ರ! ಬೆಳ್ಳಟ್ಟೆ ಗಿಡ ಎಂದು ಕರೆಸಿಕೊಳ್ಳುವ ಈ ಕುರುಚಲು ಪೊದೆ ಹಸಿರು ಎಲೆಗಳ ಜೊತೆಗೆ ಕೊಂಬೆಯ ತುದಿಯಲ್ಲಿ ಬಿಳಿಯ ಚಿಗುರುಗಳನ್ನು ಹೊಮ್ಮಿಸಿ ಮಧ್ಯದಲ್ಲಿ ಕೇಸರಿಯ ಹೂವುಗಳನ್ನು ಬಿಟ್ಟು ಆಗಸ್ಟ್ ತಿಂಗಳು ಪೂರ್ಣ ನಲಿದಾಡುತ್ತದೆ!

ಇನ್ನೊಂದು ಚಿತ್ರದಲ್ಲಿ ಸುವರ್ಣ ಗಡ್ಡೆಯ ಜಾತಿಗೆ ಸೇರಿದ ಹಾವಸೂರು ಎಂದು ಕರೆಸಿಕೊಳ್ಳುವ ಸಸ್ಯವಿದೆ. ಬೇಸಿಗೆಯಲ್ಲಿ ಮಣ್ಣಿನೊಳಗೆ ಗಡ್ಡೆ ಮಾತ್ರವಿದ್ದು ಮೇ ತಿಂಗಳಲ್ಲಿ ದುರ್ನಾತದಿಂದ ಕೂಡಿದ ಹೂವರಳಿ, ಹಸಿರು ಕಾಯಾಗಿ ಆಗಸ್ಟ್ ತಿಂಗಳಲ್ಲಿ ಹಣ್ಣಾಗುವಾಗ ತ್ರಿವರ್ಣದಿಂದ ಕೂಡಿರುವುದು ಈ ಗಿಡದ ವಿಶೇಷ. ಎಲ್ಲ ಕಾಯಿಗಳೂ ಗೊಂಚಲಿನ ಬುಡದಿಂದ ಹಣ್ಣಾದರೆ ಈ ಸಸ್ಯದ ಕಾಯಿಗಳು ತುದಿಯಿಂದ ಹಣ್ಣಾಗುತ್ತವೆ.

ಒಟ್ಟಾರೆ ಆಗಸ್ಟ್ ಬಂತೆಂದರೆ, ಪ್ರಕೃತಿಯಲ್ಲೂ ತ್ರಿವರ್ಣ ಸಂಭ್ರಮ!



